## ಟೆಸ್ಟ್

ಚಿತ್ರಕತೆ, ನಿರ್ದೇಶನ:
ಅಲೆಕ್ಸಾಂಡರ್ ಕೋಟ್

ಛಾಯಾಗ್ರಹಣ:
ಲೆವೆನ್ ಕಪಾನಾ

ಅವಧಿ: 96 ನಿಮಿಷಗಳು

ಶಬ್ದಗ್ರಹಣ:
ಫಿಲಿಪ್ ಲ್ಯಾಮ್ಶಿ




ಅಲೆಕ್ಸಾಂಡರ್ ಕೋಟ್

ಎರಡನೆಯ ಮಹಾಯುದ್ಧದಲ್ಲಿ ಮುಂದೊತ್ತಿ ಬರುತ್ತಿದ್ದ ಜರ್ಮನ್ ಆಕ್ರಮಣವನ್ನು ತಡೆಯಲು ರಷ್ಯಾ ತನ್ನ ಒಳನಾಡಿನ ನಿರ್ಜನ ಪ್ರದೇಶವೊಂದರಲ್ಲಿ ಸಮರ್ಥವಾಗಿ ಜಲಜನಕ ಬಾಂಬ್ ಸ್ಫೋಟದ ಪರೀಕ್ಷೆ ನಡೆಸಿತು. ಅದರಿಂದಾಗಿ ಹೆದರಿದ ಜರ್ಮನಿ ಮಹಾಯುದ್ಧವನ್ನು ಅಂತ್ಯಗೊಳಿಸಿತು. ಎಳೆಯ ಹೃದಯಗಳ ಪ್ರೇಮ, ರಾಜಕೀಯ ಆಟಗಳು, ಮಿಲಿಟರಿಯವರ ಕ್ರೌರ್ಯ, ಯುವಕರ ಗುರಿಯಿಲ್ಲದ ಹೋರಾಟಗಳು, ಬಾಂಬ್‌ನ ಕರಾಳತೆ ಇವೆಲ್ಲ ಇದ್ದೂ ಏನನ್ನೂ 'ಹೇಳದೆಯೂ' ಚಿತ್ರಿಕೆಗಳ ಮೂಲಕ ಧ್ವನಿಸುತ್ತಾ 'ಟೆಸ್ಟ್' ಸಿನಿಮಾ ನಮ್ಮನ್ನು ಗುಂಗಾಗಿ ಕಾಡುತ್ತದೆ.

'ಟೆಸ್ಟ್' ಚಿತ್ರದಲ್ಲಿ ಮುಖ್ಯವಾಗಿ ಇರುವ ನಾಲ್ಕು ಪಾತ್ರಗಳ ನಟನೆಯೂ ಅತ್ಯಂತ ಸಹಜವಾಗಿವೆ. ಮೊದಲ ಚಿತ್ರವಾದರೂ ಮಗಳಾಗಿ ಅಭಿನಯಿಸಿದ ಎಲೆನಾ ಆನ್ ಅಂತೂ ತಾನೊಬ್ಬ ಪ್ರಬುದ್ಧ ನಟಿ ಎನ್ನುವುದನ್ನು ಸಾಬೀತುಪಡಿಸಿದ್ದಾಳೆ. ಪಕಾಚೆಕೋವ್ ಅಪ್ಪನಾಗಿ ಹಿಂದಿನ ತಲೆಮಾರನ್ನು ಪ್ರತಿನಿಧಿಸಿದರೆ ಇಬ್ಬರು ಹುಡುಗರೂ ಯುದ್ಧ ಸಾರಿದ ಎರಡು ಶತ್ರುರಾಷ್ಟ್ರಗಳ ಪ್ರತಿನಿಧಿಗಳಾಗಿದ್ದಾರೆ.

ಚಿತ್ರದ ಸಿನಿಮಾಟೋಗ್ರಾಫರ್ ಆಗಿ ಕೆಲಸ ಮಾಡಿದ ಲೆವೆನ್ ಕಪಾನಾ(ಇದು ಅವನ ಮೊದಲ ಚಿತ್ರ!) ರಷ್ಯಾದ ನಿರ್ಜನ, ಸುಂದರ, ಮಟ್ಟಸ, ಹುಲ್ಲುಗಾವಲಿನ ದೃಶ್ಯಗಳನ್ನು ಎಷ್ಟು ಚೆನ್ನಾಗಿ ಸೆರೆ ಹಿಡಿದಿದ್ದಾನೆಂದರೆ ಶ್ರೇಷ್ಠ ಚಿತ್ರಕಲಾಕಾರರೂ ನಿಬ್ಬೆರಗಾಗಬೇಕು. ಹಸುರಾದ, ಉಬ್ಬು ತಗ್ಗುಗಳಿಲ್ಲದ ಆದರೆ, ಅತ್ಯಂತ ಸುಂದರವಾದ ಹುಲ್ಲುಗಾವಲು. ದಿಗಂತದಂಚಿನಿಂದ ಏರಿ ಹುಲ್ಲುಗಾವಲಿಗೆ ಮಾಡಾಗಿ ನಿಂತ ಮೋಡಗಳಿಲ್ಲದ ಆಕಾಶ. ಇವುಗಳಲ್ಲಿ ಯಾವ ತರಹದ ವೈವಿಧ್ಯವನ್ನು ನಿರೀಕ್ಷಿಸಬಹುದು? ಆದರೆ ಚಿತ್ರದುದ್ದಕ್ಕೂ ಪ್ರಕೃತಿಯ ದರ್ಶನ ತಾನೇ ತಾನಾಗಿ ವೈಭವಿಸುತ್ತದೆ. ಪ್ರತಿಯೊಂದು ಚಿತ್ರಿಕೆಯೂ ಒಂದು ಪೈಂಟಿಂಗ್ ಆಗಿದ್ದಂತೆ ಭಾಸವಾಗುತ್ತದೆ.